## ‘ಸ್ಮಾರ್ಟ್ ಸಿಟಿ’ಗಾಗಿ ವಿವಿಧ ರಾಜ್ಯಗಳಲ್ಲಿ ಗುರ್ತಿಸಿದ ನಗರಗಳು

| | |
|---|---|
| ಉತ್ತರ ಪ್ರದೇಶ | 12 |
| ತಮಿಳುನಾಡು | 12 |
| ಮಹಾರಾಷ್ಟ್ರ | 11 |
| ಕರ್ನಾಟಕ | 7 |
| ಮಧ್ಯಪ್ರದೇಶ | 7 |
| ಗುಜರಾತ್ | 6 |
| ಆಂಧ್ರಪ್ರದೇಶ | 4 |
| ಬಿಹಾರ | 4 |
| ರಾಜಸ್ಥಾನ | 4 |
| ಪಶ್ಚಿಮ ಬಂಗಾಳ | 4 |
| ಛತ್ತೀಸ್‌ಗಡ | 3 |
| ಪಂಜಾಬ್ | 3 |
| ಕೇರಳ | 2 |
| ಹರಿಯಾಣ | 2 |
| ಒಡಿಶಾ | 2 |
| ಸಿಕ್ಕಿಂ | 2 |
| ತೆಲಂಗಾಣ | 2 |
| ಜಮ್ಮು – ಕಾಶ್ಮೀರ | 2 |
| ಲಕ್ಷದ್ವೀಪ | 1 |
| ಪುದುಚೇರಿ | 2 |
| ಹಿಮಾಚಲ ಪ್ರದೇಶ | 2 |
| ಅರುಣಾಚಲ ಪ್ರದೇಶ | 1 |
| ಅಸ್ಸಾಂ | 1 |
| ಗೋವಾ | 1 |
| ಜಾರ್ಖಂಡ್ | 1 |
| ಮಣಿಪುರ | 1 |
| ಮಿಜೋರಾಮ್ | 1 |
| ತ್ರಿಪುರ | 1 |
| ನಾಗಾಲ್ಯಾಂಡ್ | 1 |
| ಮೇಘಾಲಯ | 1 |
| ಉತ್ತರಾಖಂಡ್ | 1 |
| ಅಂಡಮಾನ್/ನಿಕೋಬಾರ್ | 1 |
| ಚಂಡೀಗಡ | 1 |
| ದಾದ್ರಾ/ನಗರ ಹವೇಲಿ | 1 |
| ದಮನ್ – ದಿಯು | 1 |
| ದೆಹಲಿ | 1 |

### ಸ್ಮಾರ್ಟ್ ಆಗಲಿರುವ ರಾಜ್ಯದ 7 ನಗರಗಳು

ಬೆಳಗಾವಿ, ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಶಿವಮೊಗ್ಗ, ತುಮಕೂರು.

110 ನಗರಗಳ ಪೈಕಿ ಈ ತಿಂಗಳ ಕೊನೆಯ ಹೊತ್ತಿಗೆ 10 ನಗರಗಳು ಕೈಗೊಂಡಿರುವ ಎಲ್ಲಾ ಯೋಜನೆಗಳನ್ನು ಮುಗಿಸಿ ಸ್ಮಾರ್ಟ್ ನಗರ ಎನಿಸಿಕೊಳ್ಳಲಿವೆ.



ಬೆಂಗಳೂರಿನ ರೇಸ್ ಕೋರ್ಸ್ ಬಳಿ ಸ್ಮಾರ್ಟ್ ಸಿಟಿ ಯೋಜನೆಯ ಕುರುಹುಗಳು. ಫೋಟೊ: ಪ್ರಶಾಂತ್ ಎಚ್.ಜಿ.

ದೊರಕುತ್ತದೆ. ನಗರ ಜೀವನದ ಸ್ವಾತಂತ್ರ್ಯ, ಪ್ರತಿಷ್ಠೆ, ಅನುಕೂಲ, ಆತ್ಮಗೌರವ, ಹೆಚ್ಚಿನ ಅವಕಾಶ ಗಳಿಸುವ ಜನರೇ ಅಲ್ಲಿನ ಆರ್ಥಿಕ ಯಂತ್ರದ ಬಿಡಿಭಾಗಗಳಾಗಿ ಕೆಲಸ ಮಾಡುತ್ತಾರೆ. ಅಪರಿಮಿತ ಅವಕಾಶ ಕಲ್ಪಿಸಿ, ಸರಿಯಾಗಿ ಉಪಯೋಗಿಸಿಕೊಳ್ಳುವವರ ಪಾಲಿನ ಮಾಯಾದಂಡದಂತಿರುವ ವಿಶ್ವದ ಅನೇಕ ನಗರಗಳು ಜನರ ಶ್ರೇಯೋಭಿವೃದ್ಧಿಗೂ ಅನನ್ಯ ಕೊಡುಗೆ ನೀಡಿವೆ.

ಆಧುನಿಕ ನಗರಗಳಿಗೆ ಹೊಳೆಯುವ ಮುಖವಿರುವಂತೆ ಕರಾಳಮುಖವೂ ಇದೆ. ಜಗತ್ತಿನ ವಾಯು–ಶಬ್ದ ಮಾಲಿನ್ಯಕ್ಕೆ ಶೇ. 80ರಷ್ಟು ಕೊಡುಗೆ ನಗರಗಳದ್ದಾಗಿದೆ. ವಿಶ್ವದ ಶೇ. 1ರಷ್ಟು ಭೂ ಪ್ರದೇಶ ಆಕ್ರಮಿಸಿಕೊಂಡಿರುವ ನಗರಗಳು ಭೂಮಿಯ ಶೇ. 80ರಷ್ಟು ಸಂಪನ್ಮೂಲ ಬಳಸಿಕೊಳ್ಳುತ್ತವೆ. ಉತ್ಪಾದನೆಗೊಳ್ಳುವ ವಿದ್ಯುತ್ತಿನ ಮುಕ್ಕಾಲು ಭಾಗ ನಗರಗಳ ಪಾಲಾಗುತ್ತಿದೆ. ಕೇವಲ 25 ನಗರಗಳು ಇಡೀ ವಿಶ್ವದ ಒಟ್ಟು ಶಾಖವರ್ಧಕ ಅನಿಲಗಳ ಶೇ. 50ರಷ್ಟನ್ನು ಹೊಮ್ಮಿಸುತ್ತವೆ. ಉದ್ಯಮ, ಸಾರಿಗೆ ಮತ್ತು ವಿದ್ಯುತ್ ಉತ್ಪಾದನೆಗಳಿಂದ ಹೊಮ್ಮುವ ಶಾಖವರ್ಧಕ ಅನಿಲಗಳು ನಗರದ ಶೇ. 80ರಷ್ಟು ಜನರ ಉಸಿರಾಡುವ ಶುದ್ಧಗಾಳಿಯನ್ನು ಕಲುಷಿತಗೊಳಿಸಿವೆ. ಅನಿಯಂತ್ರಿತ ಸೆಕೆ, ಮಳೆ, ನೀರಿನ ಅಭಾವ ಮತ್ತು ಕಲುಷಿತ ಗಾಳಿಯ ಆಗರವಾಗಿರುವ ನಗರಗಳು ಭೂಮಿಯ ಮೇಲಿನ ಟೈಂಬಾಂಬ್‌ಗಳೆನಿಸುತ್ತಿವೆ.



‘ಸ್ಮಾರ್ಟ್ ಸಿಟಿ’ ಯೋಜನೆಯಡಿ ಸಿಂಗರಗೊಂಡಿರುವ ಶಿವಮೊಗ್ಗದ ತುಂಗಾ ನದಿ ದಂಡೆ. ಒಂದು ಪಾರ್ಶ್ವದಲ್ಲಿ ಕೊಳಚೆ ನದಿಗೆ ಸೇರುತ್ತಿದೆ!